**ದಿನಾಂಕಃ 03/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ. ಎಂ ಸಿ ಹೆಚ್ ವಕೀಲರಿಂದಃ**

1. ಈ ಅರ್ಜಿಯನ್ನು ಮಣಿಯಮ್ಮ ರವರು ಅವರ ಗಂಡನ ಮನೆಯವರ ವಿರುದ್ಧ ಸಲ್ಲಿಸಿದ್ದಾರೆ. ಅರ್ಜಿದಾರರ ಮತ್ತು 1 ರಿಂದ 4 ನೇ ಎದುರುದಾರರ ಕುಟುಂಬಕ್ಕೂ ಹಾಗೂ ನನಗೂ ಯವ್ರೂದೇ ರಕ್ತ ಸಂಬಂಧ ಇಲ್ಲ. ಅರ್ಜಿದಾರರು ತಮ್ಮ ಪಿತ್ರಾರ್ಜಿತ ಸ್ವತ್ತಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ನ್ಯಾಯಾಲಯವು ಸದರಿ ದಾವೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಡಿಕ್ರಿ ಮಾಡಿದೆ ಎಂದರೆ ಸರಿ. ನಾನು ಆ ದಾವೆಯಲ್ಲಿ ಪಕ್ಷಗಾರನಲ್ಲ. ನನಗೆ ಅರ್ಜಿದಾರರು ಹೂಡಿದ ದಾವೆಯ ಬಗ್ಗೆ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ದಾವೆ ಡಿಕ್ರಿಯಾದ 6 ವರುಷಗಳ ನಂತರ ನನ್ನ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. 1 ರಿಂದ 4 ನೇ ಎದುರುದಾರರ ಜೊತೆ ಶರೀಕಾಗಿ ಅರ್ಜಿದಾರರಿಗೆ ತೊಂದರೆ ನೀಡಲು ನನ್ನ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀಸವಾಲನ್ನು ಅರ್ಜಿದಾರರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**